ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನಿತ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಇರುವುದಿಲ್ಲ.

2) ಅನುದಾನಿತ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಿಗೆ ಸಂಬಳವನ್ನು ನೀಡುತ್ತಿಲ್ಲ. ಆದರೆ ಸರ್ಕಾರದ ಆದೇಶ ಸಂಖ್ಯೆ SWL 248 SDC 77, ದಿನಾಂಕ: 20.12.1977ರನ್ವಯ ವಿದ್ಯಾರ್ಥಿನಿಲಯದ ನಿರ್ವಹಣೆ ಸಂಬಂಧ ಸಂಖ್ಯಾಬಲಕ್ಕನುಗುಣವಾಗಿ ವಸತಿದಾರರಿಗೆ ಭೋಜನ ವೆಚ್ಚವನ್ನು ಹಾಗೂ ಪಾದ್ಯುಚ್ಛಕ್ತಿ ವೆಚ್ಚವನ್ನು ಬಾಡಿಗೆ/ಸಿಬ್ಬಂದಿಗೆ ಗೌರವಧನವನ್ನು ಮಂಜೂರು ಮಾಡಲಾಗುತ್ತಿದೆ.

3) ಇಲ್ಲ.

4) ಮಾನ್ಯತೆ ಪಡೆದ ಖಾಸಗಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.350/-ರಂತೆ ಭೋಜನ ವೆಚ್ಚವನ್ನು ಮಂಜೂರು ಮಾಡಲಾಗುತ್ತಿದೆ.

ಶಿವಮೊಗ್ಗದಲ್ಲಿನ ಗಾಜನೂರಿನ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರದ ಅವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 422(544)

ಸದಸ್ಯರ ಹೆಸರು : ಶ್ರೀ ಪಿ.ಸಿ.ಮೋಹನ್(ಚಿಕ್ಕಪೇಟೆ)

ಸಚಿವರ ಹೆಸರು-ಖಾದನಾಮ : ಶ್ರೀ ಎಂ.ಮಹಾದೇವ್(ರೇಷ್ಮೆ ಮತ್ತು ಜವಳಿ ಸಚಿವರು)

ಪ್ರಶ್ನೆ

ಅ. ಶಿವಮೊಗ್ಗದ ಗಾಜನೂರಿನಲ್ಲಿ ಇರುವ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರ ಪ್ರಾರಂಭಗೊಂಡಿದ್ದು ಯಾವಾಗ? ಈ ಕೇಂದ್ರ ಈಗ ಅವಸಾನದ ಅಂಚಿನಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಇದು ಪ್ರಾರಂಭಗೊಂಡಾಗ ಬಿಚ್ಚಾಣಿಕೆ ಕೇಂದ್ರದಲ್ಲಿದ್ದ ಯಂತ್ರ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಇ. ಸಿಬ್ಬಂದಿಗಳ ಕೊರತೆ ಹಾಗೂ ಬಿಚ್ಚಾಣಿಕೆ ಯಂತ್ರಗಳು ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಈ ಕೇಂದ್ರದ ಅಭಿವೃದ್ಧಿಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೆ?

ಉತ್ತರ

ಅ. ಶಿವಮೊಗ್ಗ ಜಿಲ್ಲೆಯ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ 23.12.1987ರಲ್ಲಿ ಸರ್ಕಾರಿ ರೇಷ್ಮೆ ನೂಲು ಬಿಚ್ಚಾಣಿಕೆ ಸಂಕೀರ್ಣ ಪ್ರಾರಂಭಿಸಲಾಗಿತ್ತು. ಈ ಸಂಕೀರ್ಣದ ಎರಡು ಮಳಿಗೆಗಳನ್ನು ಕೇಂದ್ರ ರೇಷ್ಮೆ ಮಂಡಳಿಗೆ ಹಸ್ತಾಂತರಿಸಲಾಗಿದ್ದು ಉಳಿದ ಮಳಿಗೆಗಳನ್ನು ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಆ. ನೂಲು ಬಿಚ್ಚುವ ಸಂಕೀರ್ಣದ ಮಳಿಗೆಗಳನ್ನು ಖಾಸಗಿ ಉದ್ದಿಮೆದಾರರಿಗೆ ಹಂಚಿಕೆ ಮಾಡಿ ತಮ್ಮ ಸ್ವಂತ ಉಪಕರಣಗಳನ್ನು ಅಳವಡಿಸಿಕೊಂಡು ನೂಲು ಬಿಚ್ಚಾಣಿಕೆ ಮಾಡಲು ನೀಡಲಾಗಿತ್ತು ತರಬೇತಿ ಮತ್ತು ಉತ್ಪಾದನಾ ಕೇಂದ್ರದಲ್ಲಿ 5 ಕಾಟೇಜ್ ಬೇಸಿನ್‌ಗಳ ಘಟಕ ಪ್ರಾರಂಭಿಸಲಾಗಿತ್ತು. ಈ ಘಟನೆಗಳಿಗೆ ಸಿಬ್ಬಂದಿ ಮಂಜೂರಾಗಿರುವುದಿಲ್ಲ.

ಇ. ಸಿಬ್ಬಂದಿ ಮಂಜೂರಾಗಿಲ್ಲದ ಕಾರಣ ಸಿಬ್ಬಂದಿಗಳ ಕೊರತೆ ಉದ್ಭವಿಸುವುದಿಲ್ಲ. ತರಬೇತಿ ಮತ್ತು ಉತ್ಪಾದನಾ ಕೇಂದ್ರದ 5 ಕಾಟೇಜ್ ಬೇಸಿನ್‌ಗಳು ಸುಸ್ಥಿತಿಯಲ್ಲಿವೆ.

ಈ. ಈ ರೇಷ್ಮೆ ನೂಲು ಬಿಚ್ಚಾಣಿಕೆ ಕೇಂದ್ರದ ಕಟ್ಟಡದ ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ದುರಸ್ತಿಗೆ 2.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ರೇಷ್ಮೆ ಮಂಡಲಿಯಿಂದ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಕೇಂದ್ರ ನಡೆಸಲು 2 ಮಳಿಗೆಗಳನ್ನು ಹಸ್ತಾಂತರಿಸಿದ್ದು ಅವರು ಮಲ್ಟಿ ಎಂಡ್ ಘಟಕಗಳನ್ನು ಅಳವಡಿಸಿರುತ್ತಾರೆ. ಉಳಿದ ಮಳಿಗೆಗಳಲ್ಲಿ ಮಲ್ಟಿ ಎಂಡ್ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಉದ್ದಿಮೆದಾರರಿಗೆ ಬಾಡಿಗೆ ಆಧಾರದಲ್ಲಿ ನೀಡಲು ಕ್ರಮ ಜರುಗಿಸಲಾಗುತ್ತಿದೆ.

ರೇಷ್ಮೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 424(546)

ಸದಸ್ಯರ ಹೆಸರು : ಶ್ರೀ ಮೋಹನ್ ಪಿ.ಸಿ.(ಚಿಕ್ಕಪೇಟೆ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಎಂ.ಮಹಾದೇವ್(ರೇಷ್ಮೆ ಮತ್ತು ಜವಳಿ ಸಚಿವರು)